**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**
**ಎಸ್.ಸಿ. ಸಂಃ 10003/2024**

ಪಿಡಬ್ಲೂ–8

ಸಿಡಬ್ಲೂ– 8

ಸಾಕ್ಷಿ ಹೆಸರು – ಮನೋಜ್

ತಂದೆ ಹೆಸರು – ಚಂದ್ರಪ್ಪ

ವಯಸ್ಸು – 19 ವರ್ಷ

ಉದ್ಯೋಗ – ವಿದ್ಯಾರ್ಥಿ

ವಾಸಃ – ಸಾಗರ

**ಪ್ರಮಾಣ ವಚನ ಭೋದಿಸಿದ ದಿನಾಂಕಃ** 20–01–2026.

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

ಚಾಸಾ1 ನನ್ನ ತಂದೆ. ಚಾಸಾ2 ರಿಂದ ಚಾಸಾ7 ಪರಿಚಯ ಇರುತ್ತಾರೆ. ಚಾಸಾ9 ನನ್ನ ತಂಗಿ. ಮೃತೆ ನಿರ್ಮಲಾ ನನ್ನ ತಾಯಿ. 1 ನೇ ಆರೋಪಿ ನನ್ನ ದೊಡ್ಡಪ್ಪ. 2 ಮತ್ತು 3 ನೇ ಆರೋಪಿತರು ನನ್ನ ದೊಡ್ಡಪ್ಪನ ಮಕ್ಕಳು. ನಮ್ಮ ಮನೆ ಸೊರಬ ತಾಲ್ಲೂಕು, ತಲಗುಂದ ಗ್ರಾಮದಲ್ಲಿ ಇರುತ್ತದೆ. ನಮ್ಮ ಮನೆಯಲ್ಲಿ ನಾನು, ನನ್ನ ತಂದೆ , ತಾಯಿ ಮತ್ತು ನನ್ನ ತಂಗಿ ವಾಸ ಮಾಡಿಕೊಂಡಿದ್ದೆವು. 2021 ರಲ್ಲಿ ನಾನು 9 ನೇ ತರಗತಿಯಲ್ಲಿ ಓದುತ್ತಿದ್ದೆ. ನನ್ನ ತಂಗಿ 7 ನೇ ತರಗತಿಯಲ್ಲಿ ಓದುತ್ತಿದ್ದಳು. ನನ್ನ ತಂದೆ ಚಾಸಾ1 ರವರು ಗದ್ದೆ ಕೆಲಸ ಮತ್ತು ಕೂಲಿ

ಕೆಲಸ ಮಾಡುತ್ತಾರೆ. ನನ್ನ ತಂದೆ ನಮ್ಮ ಗ್ರಾಮದಲ್ಲಿ ಮತ್ತು ಬೇರೆ ಗ್ರಾಮಗಳಲ್ಲಿ ಕೂಲಿ ಕೆಲಸ ಮಾಡುತ್ತಾರೆ. ನನ್ನ ತಂದೆಯವರಿಗೆ ಸ.ನಂಃ242 ರಲ್ಲಿ 2 ಎಕರೆ ಬಗರ್ ಹುಕುಂ ಜಮೀನು ಇರುತ್ತದೆ. ಸದರಿ ಜಮೀನಿನ ವಿಚಾರವಾಗಿ ನನ್ನ ತಂದೆ , ತಾಯಿ ಮತ್ತು ಆರೋಪಿತರ ನಡುವೆ ಜಗಳ ಆಗುತ್ತಿತ್ತು. ಆರೋಪಿತರು ನನ್ನ ತಂದೆ ಮತ್ತು ತಾಯಿಗೆ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದರು ಮತ್ತು ಹಲ್ಲೆ ಮಾಡಲು ಬಂದಿದ್ದರು. ಆರೋಪಿತರು ಸದರಿ ಜಮೀನನ್ನು ತಮಗೆ ಬಿಟ್ಟು ಕೊಡಿ ಎಂದು ನನ್ನ ತಂದೆ, ತಾಯಿಯವರಿಗೆ ಬೆದರಿಕೆ ಹಾಕುತ್ತಿದ್ದರು.

ದಿನಾಂಕಃ 19–11–2021 ರಂದು ನನ್ನ ತಂದೆ ಚಾಸಾ1 ರವರು ಕೆಲಸದ ನಿಮಿತ್ತ ಬನವಾಸಿಗೆ ಹೋಗಿದ್ದರು. ಆ ಸಮಯದಲ್ಲಿ ನಮ್ಮ ಮನೆಯಲ್ಲಿ ನಾನು, ನನ್ನ ತಾಯಿ ಮತ್ತು ನನ್ನ ತಂಗಿ ಇದ್ದೆವು. ದಿನಾಂಕಃ 20–11–2021 ರಂದು ಬೆಳಿಗ್ಗೆ 7–00 ಗಂಟೆಗೆ 1 ಮತ್ತು 2 ನೇ ಆರೋಪಿತರು 3 ನೇ ಆರೋಪಿಯ ಕುಮ್ಮಕ್ಕಿನಿಂದ ನಮ್ಮ ಮನೆಯ ಹತ್ತಿರ ಬಂದು , ನನ್ನ ತಾಯಿ ನಿರ್ಮಲಾರವರನ್ನು ಮನೆಯಿಂದ ಹೊರಗಡೆ ಕರೆದು , 1 ಮತ್ತು 2 ನೇ ಆರೋಪಿತರು ನನ್ನ ತಾಯಿಗೆ ಏನೇ ಬೇವರ್ಸಿ ಮುಂಡೆ , ನಿನ್ನ ಗಂಡನನ್ನು ಎಲ್ಲಿಗೆ ಕಳುಹಿಸಿದ್ದೀಯಾ ಇದಕ್ಕೆಲ್ಲಾ ನೀನೆ ಕಾರಣ, ಜಮೀನನ್ನು ಬಿಟ್ಟು ಕೊಡಲಿಲ್ಲ ಎಂದರೆ ನಿನಗೂ ಮತ್ತು ನಿನ್ನ ಗಂಡನಿಗೂ ಒಂದು ಗತಿ ಕಾಣಿಸುತ್ತೇವೆ, ನೀನೇ ಇದಕ್ಕೆಲ್ಲಾ ಕಾರಣ,

ನೀನು ಸತ್ತರೆ ಜಮೀನು ನಮಗೆ ಸಿಗುತ್ತೆ, ನಿನ್ನ ಗಂಡನನ್ನು ನಮ್ಮ ಜೊತೆ ಮಾತನಾಡಲು ಬಿಡುವುದಿಲ್ಲ, ಇಲ್ಲ ಸಲ್ಲದ್ದನ್ನು ಹೇಳಿ ನಮ್ಮ ಮೇಲೆ ಛೂ ಬಿಡುತ್ತೀಯಾ, ಜಮೀನನ್ನು ಬಿಟ್ಟು ಕೊಟ್ಟರೆ ಸರಿ, ಇಲ್ಲ ಅಂದರೆ ನಿಮಗೆ ಸ್ಮಧದಲ್ಲೆ ಒಂದು ಗತಿ ಕಾಣಿಸುತ್ತೇವೆ ಎಂದು ಬೆದರಿಕೆ ಹಾಕಿದರು. ಆ ಸಮಯದಲ್ಲಿ ನಮ್ಮ ಮನೆಯ ಅಕ್ಕಪಕ್ಕದ ಮನೆಯವರಾದ ಕೃಷ್ಣಪ್ಪ, ರಾಮಪ್ಪ, ಕೆರಿಯಪ್ಪ, ಗಣೇಶ ನಮ್ಮ ಮನೆಯ ಹತ್ತಿರ ಬಂದು ಗಲಾಟೆಯನ್ನು ಬಿಡಿಸಿ 1 ಮತ್ತು 2 ನೇ ಆರೋಪಿತರನ್ನು ಕಳುಹಿಸಿದರು. ನಾನು ನನ್ನ ತಾಯಿಗೆ ಸಮಾಧಾನ ಮಾಡಿ ಶಾಲೆಗೆ ಹೋದೆನು. ನಾನು ಶಾಲೆಯಿಂದ ಬಂದ ಮೇಲೆ ನನ್ನ ದೊಡ್ಡ ಮಾವನಿಗೆ ಕರೆ ಮಾಡಿ ವಿಚಾರ ತಿಳಿಸಿದೆ. ನನ್ನ ದೊಡ್ಡ ಮಾವ ಮಾರನೇ ದಿವಸ ನಮ್ಮ ಮನೆಗೆ ಬಂದು ನನ್ನ ತಾಯಿಗೆ ಸಮಾಧಾನ ಮಾಡಿರುತ್ತಾರೆ.

ದಿನಾಂಕಃ 24–11–2021 ರಂದು ಎಂದಿನಂತೆ ನಾನು ಮತ್ತು ನನ್ನ ತಂಗಿ ಶಾಲೆಗೆ ಹೋದೆವು. ನಾನು ಮತ್ತು ನನ್ನ ತಂಗಿ ಸಂಜೆ 6–00 ಗಂಟೆಗೆ ಶಾಲೆ ಮುಗಿಸಿಕೊಂಡು ಮನೆಗೆ ಬಂದಾಗ, ಮನೆಯ ಬಾಗಿಲು ತೆಗೆದಿತ್ತು. ನನ್ನ ತಾಯಿ ಮನೆಯಲ್ಲಿ ಇರಲಿಲ್ಲ. ಅಡುಗೆ ಮನೆಯ ಒಳಗಡೆ ಸಾಂಬಾರ್ ಮಾಡಲು ಪದಾರ್ಥಗಳನ್ನು ಇಟ್ಟಿದ್ದರು ಮತ್ತು ಒಲೆಯ ಮೇಲೆ ಅನ್ನಕ್ಕೆ ಇಟ್ಟಿದ್ದರು. ನಂತರ ನಾನು ಅಕ್ಕಪಕ್ಕದವರನ್ನು ವಿಚಾರಿಸಿದಾಗ

ಅವರುಗಳು ನನ್ನ ತಾಯಿ ಬಂದಿರುವುದಿಲ್ಲ ಎಂದು ತಿಳಿಸಿರುತ್ತಾರೆ. ನಂತರ ನಾನು ನನ್ನ ತಂದೆ ಮತ್ತು ಮಾವನಿಗೆ ಕರೆ ಮಾಡಿ ವಿಚಾರ ತಿಳಿಸಿದೆ. ನನ್ನ ತಂದೆ ಮತ್ತು ನನ್ನ ಮಾವ ಸಂಜೆ ಮನೆಗೆ ಬಂದರು. ನಾವೆಲ್ಲಾ ನನ್ನ ತಾಯಿಯನ್ನು ರಾತ್ರಿವರೆಗೂ ಹುಡುಕಿದೆವು ಆದರೆ ನನ್ನ ತಾಯಿ ಸಿಗಲಿಲ್ಲ.

ದಿನಾಂಕಃ 25–11–2021 ರಂದು ಬೆಳಿಗ್ಗೆ 7–00 ಗಂಟೆ ಸುಮಾರಿಗೆ ಗ್ರಾಮದವರು ನನ್ನ ತಾಯಿಯ ಶವ ಬಾವಿಯಲ್ಲಿ ಇರುತ್ತದೆ ಎಂದು ಹೇಳಿದರು. ಗ್ರಾಮಸ್ಥರಾದ ಗಣೇಶ, ಅಜ್ಜಣ್ಣ, ಕುಮಾರ ಮತ್ತು ಮಹೇಂದ್ರ ಎಲ್ಲರೂ ಸೇರಿ ನನ್ನ ತಾಯಿಯ ಶವವನ್ನು ಬಾವಿಯಿಂದ ಹೊರ ತೆಗೆದರು. ನಂತರ ನನ್ನ ತಾಯಿಯ ಶವವನ್ನು ವಾಹನದಲ್ಲಿ ಆನವಟ್ಟಿ ಸರ್ಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋದೆವು. ಆಸ್ತಿ ವಿಚಾರಕ್ಕೆ ಆರೋಪಿತರೇ ನನ್ನ ತಾಯಿಯನ್ನು ಬಾವಿಗೆ ಹಾಕಿರಬಹುದು. ಪೋಲೀಸರು ನನ್ನನ್ನು ವಿಚಾರಿಸಿರುತ್ತಾರೆ. ನಾನು ಅವರ ಮುಂದೆ ಹೇಳಿಕೆ ನೀಡಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ. ನ್ಯಾಯಾಲಯದ ಮುಂದಿರುವ ವ್ಯಕ್ತಿಗಳು ಆರೋಪಿತರಾಗಿರುತ್ತಾರೆ. ಸಾಕ್ಷಿ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಬಿ ಪಿ ಜಿ ವಕೀಲರಿಂದಃ</u>**

ನಾನು ಪೋಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ಆರೋಪಿತರು ನನ್ನ ತಾಯಿಯನ್ನು ಬಾವಿಗೆ ಹಾಕಿ ಕೊಲೆ ಮಾಡಿರುತ್ತಾರೆ ಎಂದು ಹೇಳಿರುತ್ತೇನೆ. 2021 ರಲ್ಲಿ ನಾನು ಜಡೆ ಗ್ರಾಮದಲ್ಲಿರುವ ಸರ್ಕಾರಿ ಪೌಢ ಶಾಲೆಯಲ್ಲಿ 9 ನೇ ತರಗತಿ ಓದುತ್ತಿದ್ದೆ. ನಮ್ಮ ಊರಿನಿಂದ ನಮ್ಮ ಶಾಲೆಗೆ 4 ಕಿ ಮೀ ಆಗುತ್ತದೆ. ನಾನು ಮಾತ್ರ ಸದರಿ ಶಾಲೆಯಲ್ಲಿ ಓದುತ್ತಿದ್ದೆ. ನನ್ನ ತಂಗಿ ನಮ್ಮ ಗ್ರಾಮದಲ್ಲಿರುವ ಸರ್ಕಾರಿ ಶಾಲೆಯಲ್ಲಿ 7 ನೇ ತರಗತಿಯಲ್ಲಿ ಓದುತ್ತಿದ್ದಳು. ನಾವು ಬೆಳಿಗ್ಗೆ 9–00 ಗಂಟೆಗೆ ಶಾಲೆಗೆ ಹೋಗಿ ಸಂಜೆ 5–30 ಗಂಟೆಗೆ ಮನೆಗೆ ಬರುತ್ತಿದ್ದೆವು. ನನ್ನ ತಂಗಿ ನಮ್ಮ ಗ್ರಾಮದಲ್ಲಿರುವ ಶಾಲೆಯಲ್ಲಿ ಓದುತ್ತಿದ್ದರಿಂದ ಅವಳು ಕೆಲವೊಮ್ಮೆ ಬೇಗ ಮನೆಗೆ ಬರುತ್ತಿದ್ದಳು.

ಘಟನೆ ನಡೆಯಿತು ಎಂದು ಹೇಳಲಾದ ದಿವಸ ನಾನು, ನನ್ನ ತಂಗಿ ಒಟ್ಟಿಗೆ ಮನೆಗೆ ಬಂದಿರುತ್ತೇವೆ. ನನ್ನ ತಂದೆ ಸೆಂಟ್ರಿಂಗ್ ಕೆಲಸ ಮಾಡಲು ಬನವಾಸಿಗೆ ಹೋಗಿದ್ದರು. ನನ್ನ ತಂದೆ ನಮ್ಮ ಊರಿನಲ್ಲಿ ಚಾಸಾ7–ಮಹೇಂದ್ರ ರವರ ಜೊತೆ ಗಾರೆ ಕೆಲಸ ಮಾಡುತ್ತಿದ್ದರು. ನನ್ನ ತಂದೆಗೆ ಒಟ್ಟು 7 ಜನ ಅಣ್ಣ ತಮ್ಮಂದಿರು. ನನ್ನ ಅಜ್ಜನ ಹೆಸರಿನಲ್ಲಿ ಆಸ್ತಿ ಇದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನನ್ನ ಅಜ್ಜನ ಆಸ್ತಿಯಲ್ಲಿ ಯಾರ್ಯಾರು ಯಾವ

ಯಾವ ಸರ್ವೆ ನಂಬರ್ ಜಮೀನನ್ನು ಹಂಚಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಸ.ನಂ. 242 ರ ಜಮೀನಿಗೆ ಜಮೀನು ಮಂಜೂರಾತಿ ಮಾಡುವಂತೆ ಅರ್ಜಿಯನ್ನು ಕೊಟ್ಟಿದ್ದರು. ನಿಡಿ–5 ಅರ್ಜಿಯಲ್ಲಿ ಸರ್ ನಂಃ 244 ಅಂತ ಇರುತ್ತದೆ ಎಂದರೆ ಸಾಕ್ಷಿ ಮಾಹಿತಿ ಕೊರತೆಯಿಂದ ಸರ್ವೆ ನಂಬರ್ ತಪ್ಪಾಗಿರುತ್ತದೆ, ನಂತರ ಎ.ಸಿ. ಕೋರ್ಟ್ ಗೆ ಹೋಗಿ ಸರಿಪಡಿಸಿರುತ್ತೇವೆ ಎಂದು ಹೇಳುತ್ತಾರೆ. ನನ್ನ ತಂದೆ ಅರ್ಜಿಯಲ್ಲಿ ಸರ್ವೆ ನಂಬರ್ ನ್ನು ತಪ್ಪಾಗಿ ನಮೂದಿಸಿ ಕೊಟ್ಟಿದ್ದರಿಂದ ನನ್ನ ತಂದೆಗೆ ಯಾವುದೇ ಜಮೀನು ಮಂಜೂರಾತಿ ಆಗಿರುವುದಿಲ್ಲ ಎಂದರೆ ಸರಿ. ನನ್ನ ತಂದೆಯ ಅಣ್ಣ ತಮ್ಮಂದಿರಿಗೆ ಬೇರೆ ಸರ್ವೆ ನಂಬರ್ ನಲ್ಲಿ ಜಮೀನು ಮಂಜೂರಾತಿಯಾಗಿರುತ್ತದೆ ಎಂದರೆ ಸರಿ. ನಮಗೆ ಜಮೀನು ಮಂಜೂರಾತಿ ಆಗದೇ ಮತ್ತು ಆರೋಪಿತರಿಗೆ ಜಮೀನು ಮಂಜೂರಾದ ಕಾರಣ ನನ್ನ ತಂದೆ ತಾಯಿ ಆರೋಪಿತರ ಜೊತೆ ಜಗಳ ಆಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿಯ ಸಾವನ್ನು ಜಮೀನು ವಿಚಾರಕ್ಕಾಗಿ ಬಳಸಿಕೊಳ್ಳುತ್ತಿದ್ದೇವೆ ಎಂದರೆ ಸರಿಯಲ್ಲ. ನನ್ನ ತಾಯಿಯ ಸಾವಿಗೂ ಮತ್ತು ಆರೋಪಿತರಿಗೂ ಯಾವುದೇ ರೀತಿ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆ ನನ್ನ ತಾಯಿಯನ್ನು ಮದುವೆ ಆಗುವ ಮುನ್ನ ಅವರು ಗೋವಾದಲ್ಲಿ ವಾಸ ಮಾಡಿಕೊಂಡಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ತಂದೆ

ನನ್ನ ತಾಯಿಯನ್ನು ಮದುವೆಯಾದ ನಂತರವು ಸಹ ಕೇರಳದಲ್ಲಿ ಕೆಲಸ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಅವಾಗಿನಿಂದ ಇಲ್ಲಿಯವರೆಗೂ ನನ್ನ ತಂದೆ ಚಾಸಾ7–ಮಹೇಂದ್ರರವರ ಜೊತೆ ಗಾರೆ ಕೆಲಸಕ್ಕೆ ಹೋಗುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಬಗರ್ ಹುಕುಂ ಜಮೀನಿನಲ್ಲಿ ನಿರಂತರವಾಗಿ ಕೃಷಿ ಮಾಡಿದರೆ ಆ ಜಮೀನನ್ನು ಸರ್ಕಾರ ಮಂಜೂರಾತಿ ಮಾಡುತ್ತದೆ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ನನ್ನ ತಂದೆ ಗಾರೆ ಕೆಲಸ ಮಾಡಲು ಗೋವಾ, ಕೇರಳ ಮತ್ತು ಬೇರೆ ಊರುಗಳಿಗೆ ಹೋಗುತ್ತಿದ್ದರು, ಅವರು ನಿರಂತರವಾಗಿ ಯಾವುದೇ ಕೃಷಿ ಕೆಲಸ ಸದರಿ ಜಮೀನಿನಲ್ಲಿ ಮಾಡುತ್ತಿರಲಿಲ್ಲ, ಆದುದರಿಂದ ಜಮೀನು ನನ್ನ ತಂದೆ ಹೆಸರಿಗೆ ಮಂಜೂರಾತಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಹಾಗೆ 1 ಮತ್ತು 2 ನೇ ಆರೋಪಿತರು ನಮ್ಮ ಮನೆ ಹತ್ತಿರ ಬಂದು ನನ್ನ ತಾಯಿಗೆ ಅವಾಚ್ಯ ಶಬ್ದಗಳಿಂದ ಬೈದು ಮತ್ತು ಬೆದರಿಕೆ ಹಾಕಿದರು ಎಂದು ಹೇಳಲಾದ ಸಮಯದಲ್ಲಿ ನಾನು ನಮ್ಮ ಮನೆಯಲ್ಲಿ ಇದ್ದೆ. ಆ ಸಮಯದಲ್ಲಿ ನಾನು, ನನ್ನ ತಾಯಿ ಮತ್ತು ನನ್ನ ತಂಗಿ ಮೂರು ಜನ ಮನೆಯಲ್ಲಿದ್ದೆವು. ನಮ್ಮ ಮನೆಯಿಂದ ರಸ್ತೆಗೆ 15 ಅಡಿ ಆಗುತ್ತದೆ. 1 ಮತ್ತು 2 ನೇ ಆರೋಪಿ ಇಬ್ಬರೂ ಸೇರಿ ಅವಾಚ್ಯ ಶಬ್ದಗಳಿಂದ ನನ್ನ ತಾಯಿಯನ್ನು ಬೈದಿರುತ್ತಾರೆ. ಯಾರು ಮೊದಲು ಅವಾಚ್ಯ ಶಬ್ದಗಳನ್ನು ಬಳಸಿ ನನ್ನ ತಾಯಿಯನ್ನು

ಬೈದಿರುತ್ತಾರೆ ಎಂದು ಹೇಳಲು ಸಾಧ್ಯವಾ ಎಂದರೆ ಸಾಕ್ಷಿ ನನ್ನ ದೊಡ್ಡಪ್ಪ ಬೈದಿರುತ್ತಾರೆ ಎಂದು ಹೇಳುತ್ತಾರೆ. ನಾನು ಪೋಲೀಸರ ಮುಂದೆ ನನ್ನ ದೊಡ್ಡಪ್ಪ ಆ ರೀತಿ ಬೈದರು ಎಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ. ನಾನು ಜೀವ ಬೆದರಿಕೆ ಮತ್ತು ಕುಮ್ಮಕ್ಕಿನ ಬಗ್ಗೆ ಹೇಳಿಕೆ ಮತ್ತು ಸಾಕ್ಷ್ಯವನ್ನು ಪೋಲೀಸರಿಗೆ ಒದಗಿಸಿರುತ್ತೇನೆ ಎಂದರೆ ಸರಿ. ಅವಾಚ್ಯ ಶಬ್ದಗಳಿಂದ ಬೈದರು ಎಂದು ಹೇಳಲಾದ ದಿವಸ 3 ನೇ ಆರೋಪಿ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿ. 3 ನೇ ಆರೋಪಿ ಸುಮಾರು 8-10 ವರ್ಷದಿಂದ ಸಾಗರದಲ್ಲಿ ಕೆಲಸ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಘಟನೆ ನಡೆದಾಗಿನಿಂದ ಪೋಲೀಸರು ಬಂಧಿಸುವವರೆಗೂ 3 ನೇ ಆರೋಪಿ ನಮ್ಮ ಊರಿಗೆ ಬಂದಿರಲಿಲ್ಲ ಎಂದರೆ ಸರಿ.ದಿನಾಂಕಃ 19-11-2021 ರಂದು ನಾನು ಶಾಲೆಗೆ ಹೋಗಿರುತ್ತೇನೆ ಎಂದರೆ ಸರಿ. ಆ ದಿವಸ ಯಾವ ವಾರ ಆಗಿರಬಹುದು ಎಂದು ಹೇಳಲು ಸಾಧ್ಯವಾ ಎಂದರೆ ಸಾಕ್ಷಿ ಶುಕ್ರವಾರ ಆಗಿರಬಹುದು ಎಂದು ಹೇಳುತ್ತಾರೆ.

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಹಾಗೆ ದಿನಾಂಕಃ 19-11-2021 ರಂದು 1 ಮತ್ತು 2 ನೇ ಆರೋಪಿತರು ನಮ್ಮ ಮನೆಯ ಹತ್ತಿರ ಬಂದಿರುವುದಿಲ್ಲ ಮತ್ತು ಅವರು ನನ್ನ ತಾಯಿಯನ್ನು ಉದ್ದೇಶಿಸಿ ಅವಾಚ್ಯ ಶಬ್ದಗಳಿಂದ ಬೈದು, ಬೆದರಿಕೆ ಹಾಕಿರುವುದಿಲ್ಲ ಮತ್ತು ನಾನು ಸದರಿ ವಿಚಾರವನ್ನು ನನ್ನ ದೊಡ್ಡ ಮಾವನಿಗೆ ಕರೆ ಮಾಡಿ ತಿಳಿಸಿರುವುದಿಲ್ಲ ಮತ್ತು ಅವರು ನಮ್ಮ ಮನೆಗೆ ಬಂದು ನನ್ನ ತಾಯಿಗೆ ಸಮಾಧಾನ

ಮಾಡಿರುವುದಿಲ್ಲ, ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕಃ 24–11–2021 ರಂದು ಎಂದಿನಂತೆ ನಾನು ಶಾಲೆಗೆ ಬೆಳಿಗ್ಗೆ 9.00 ಗಂಟೆಗೆ ಹೋಗಿ ಸಂಜೆ 5–30 ಗಂಟೆಗೆ ಬಂದಿರುತ್ತೇನೆ ಎಂದರೆ ಸರಿ. ದಿನಾಂಕಃ 24–11–2021 ರಂದು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಹಾಗೆ ನನ್ನ ತಾಯಿ ಕಾಣುತ್ತಿಲ್ಲ ಎಂದು ನನ್ನ ತಂದೆಗೆ ಕರೆ ಮಾಡಿ ಹೇಳಿರುವುದಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕಃ 25–11–2021 ರಂದು ನನ್ನ ತಾಯಿಯ ಶವವನ್ನು ಮೊದಲು ನನ್ನ ತಂದೆಯವರು ನೋಡಿರುತ್ತಾರೆ. ನನ್ನ ತಂದೆಯವರು ನನ್ನ ತಾಯಿಯ ಶವವನ್ನು ನೋಡಿದಾಗ ಶವ ಅಂಗಾತವಾಗಿ ಇತ್ತಾ ಅಥವಾ ಬೋರಲಾಗಿ ಇತ್ತಾ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ತಂದೆಯವರು ಮನೆಗೆ ಬಂದಾಗ ಸಂಜೆ 7–30 ಗಂಟೆ ಆಗಿತ್ತು. ದಿನಾಂಕಃ 25–11–2021 ರಂದು ಬೆಳಿಗ್ಗೆ 7–00 ಗಂಟೆಗೆ ನನ್ನ ತಾಯಿಯ ಶವ ಸಿಕ್ಕಿರುತ್ತದೆ ಎಂದು ಪೋಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ. ನಾವು ಶವವನ್ನು ತೆಗೆದುಕೊಂಡು ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ. ನಾವು ಶವವನ್ನು ಆಟೋದಲ್ಲಿ ತೆಗೆದುಕೊಂಡು ಆಸ್ಪತ್ರೆಗೆ ಹೋಗಿರುತ್ತೇವೆ.

ದಿನಾಂಕಃ24–11–2021 ರಂದು ನಾನು ಬೆಳಿಗ್ಗೆ ಶಾಲೆಗೆ ಹೋದ ಸಮಯದಿಂದ ಮತ್ತು ನಾನು ಶಾಲೆಯಿಂದ ವಾಪಾಸ್ಸು ಬರುವ ಸಮಯದವರೆಗೂ ಮನೆಯಲ್ಲಿ ಏನು

ನಡೆಯಿತು ಎಂದುನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ಆ ದಿವಸ ನಾನು ನಮ್ಮ ಮನೆಗೆ ಬರುವ ಮೊದಲು ನನ್ನ ತಂದೆಯವರು ಬಂದಿದ್ದರು ಎಂದರೆ ಸರಿಯಲ್ಲ. ನಾನು ಹೇಳಿದ ಹಾಗೆ ದಿನಾಂಕಃ 24-11-2021 ರಂದು ನನ್ನ ತಾಯಿ ಮೃತಪಟ್ಟಿದ್ದರೆ ದಿನಾಂಕಃ25-11-2021 ರಂದು ಬೆಳಿಗ್ಗೆ 7 -00 ಗಂಟೆಗೆ ನನ್ನ ತಾಯಿಯ ಶವ ತೇಲುವ ಸಾಧ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ದುಷ್ಕೃತ್ಯವನ್ನು ಮರೆ ಮಾಚುವ ಸಲುವಾಗಿ ಆರೋಪಿತರ ಮೇಲೆ ಸುಳ್ಳು ಆರೋಪವನ್ನು ಹೊರಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ತಾಯಿಯನ್ನು ಸಾಯಿಸಿ ಬಾವಿಗೆ ಹಾಕಿರುವುದನ್ನು ನಾನು ಮತ್ತು ಗ್ರಾಮಸ್ಥರು ನೋಡಿರುವುದಿಲ್ಲ. ಅದೇ ರೀತಿ ನನ್ನ ತಾಯಿ ಬಾವಿಗೆ ಹಾಕಿ ಆತ್ಮಹತ್ಯೆ ಮಾಡಿಕೊಂಡಿರುವುದನ್ನು ನಾನಾಗಲೀ ಮತ್ತು ಗ್ರಾಮಸ್ಥರಾಗಲೀ ನೋಡಿರುವುದಿಲ್ಲ ಎಂದರೆ ಸರಿ. ಸರ್ಕಾರದ ಜಮೀನನ್ನು ಪಡೆಯುವ ದುರುದ್ದೇಶದಿಂದ ಈ ವಿಚಾರವನ್ನು ಮುಂದಿಟ್ಟು ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ದಿನಾಂಕಃ 19-11-2021 ರಿಂದ ದಿನಾಂಕಃ 23-11-2021 ರವರೆಗೆ ನಾವು ಆರೋಪಿತರ ವಿರುದ್ಧ ಯಾವುದೇ ದೂರನ್ನು ಕೊಟ್ಟಿರುವುದಿಲ್ಲ. ನನ್ನ ತಾಯಿಯ ಸಾವಿನ ನಂತರ ನಾವೆಲ್ಲರೂ ಯೋಚನೆ ಮಾಡಿ ಆರೋಪಿತರ ವಿರುದ್ಧ ಸುಳ್ಳು ದೂರನ್ನು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಾನು ಹೇಳಿದ ರೀತಿ 1 ಮತ್ತು 2 ನೇ ಆರೋಪಿತರು

3 ನೇ ಆರೋಪಿಯ ಕುಮ್ಮಕ್ಕಿನಿಂದ ಯಾವುದೇ ದುಷ್ಕೃತ್ಯವನ್ನು ಎಸಗಿರುವುದಿಲ್ಲ, ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ 1 ರಿಂದ 3 ನೇ ಆರೋಪಿತರ ದುಷ್ಪ್ರೇರಣೆಯಿಂದ ಮರಣ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).